**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ.**

**ಸಿ.ಸಿ ನಂ: 1728/2023**

**ಪಿ.ಡಬ್ಲ್ಯೂ-1**
**ಸಿ.ಡಬ್ಲ್ಯೂ-2**

ಹೆಸರು : ಮಂಜುನಾಥ ಬಸಪ್ಪಾ ತಳವಾರ

ವಯಸ್ಸು : **41** ವರ್ಷ

ಉದ್ಯೋಗ : ವ್ಯವಸಾಯ

ವಾಸ : ಕಾಮಸಿನಕೊಪ್ಪ ಗ್ರಾಮ.

ದಿನಾಂಕ 18-03-2024 ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸಸಅ ರವರಿಂದ</u>

ಸಾಕ್ಷಿದಾರರಿಗೆ ಈಗ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಮಹಜರನ್ನು ನಿ.ಪಿ.1 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.1-ಎ ಎಂದು ಗುರುತಿಸಲಾಯಿತು. ಸದರಿ ಸುಮಾರು 2 ವರ್ಷಗಳ ಹಿಂದೆ ಖಾನಾಪೂರ ಪೋಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಮಹಜರದಲ್ಲಿ ಬರೆದಿರುವ ವಿಚಾರಗಳು ಗೊತ್ತಿಲ್ಲ. ನಮ್ಮ ಸಮಕ್ಷಮ ಯಾವುದೇ ಮುದ್ದೆ ಮಾಲುಗಳನ್ನು ಅಮಾನತ್ ಪಡಿಸಿಕೊಂಡಿರುವುದಿಲ್ಲ.

*(ಸಾಕ್ಷಿಯು ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿದ್ದುದರಿಂದ ಸಸಅ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸಸಅ ರವರಿಗೆ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)*

<u>ಪಾಟೀ ಸವಾಲುಃ ಸಸಅ ರವರಿಂದ</u>

ದಿನಾಂಕ 17.02.2023 ರಂದು ನನ್ನನ್ನು ಹಾಗೂ ಚಾ.ಸಾ.2 ರವರನ್ನು ಚಾ.ಸಾ.1 ರವರು ಕರೆಯಿಸಿ ತಮಗೆ ಬಂದ ಮಾಹಿತಿಯನ್ನು ತಿಳಿಸಿ ತಾವು ಮಾಡುವ ದಾಳಿಗೆ ಪಂಚರಾಗಿ ಸಹಕರಿಸಬೇಕೆಂದು ಕೋರಿಕೊಂಡಿರುತ್ತಾರೆಂದರೆ ಸರಿಯಲ್ಲ. ನಾವು ಒಪ್ಪಿ ಕೊಂಡ ಮೇರೆಗೆ ಕಾಮಸಿನಕೊಪಬ್ಬ ಗ್ರಾಮದ ಮಡಿವಾಳೇಶ್ವರ ಓಣಿಯ ಹತ್ತಿರ ನೀರಿನ ಟ್ಯಾಂಕ್ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ದಾಳಿ ಮಾಡಿದಾಗ ಆರೋಪಿಯು ತನ್ನ ಬಳಿ ಅಕ್ರಮವಾಗಿ 90 ಮಿಲಿಯ ಒರಿಜನಲ್ ಚಾಯಿಸ್ ವಿಸ್ಕಿಯ 58 ಟೆಟ್ರಾ ಪ್ಯಾಕೇಟುಗಳನ್ನು ಸ್ವಾಧೀನ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ಚಾ.ಸಾ.1 ರವರು ದಾಳಿ ಮಾಡಿ ಸದರಿ ಮದ್ಯದ ಪ್ಯಾಕೇಟನ್ನು

ಹಾಗೂ ಆರೋಪಿಯನ್ನು ವಶಕ್ಕೆ ಪಡೆದುಕೊಂಡಿರುತ್ತಾರೆಂದರೆ ಸರಿಯಲ್ಲ. ರಾಸಾಯನಿಕ ಪರೀಕ್ಷೆಗಾಗಿ ಸುಮಾರು ಎರಡು ಪ್ಯಾಕೇಟುಗಳನ್ನು ಪ್ರತ್ಯೇಕವಾಗಿ ತೆಗೆದು ಸೀಲು ಮಾಡಿರುತ್ತಾರೆಂದರೆ ಸರಿಯಲ್ಲ. ಎಲ್ಲಾ ವಿಚಾರ ತಿಳಿದುಕೊಂಡು ನಾನು ಮಹಜರ್ ಗೆ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಪಾಟೀ ಸವಾಲುಃ  ಆರೋಪಿತರ ಪರ ವಕೀಲರಿಂದ</u>

ಏನೂ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.